ಅಸಲು ದಾವೆ ನಂ.67/2022

ಡಿ.ಡಬ್ಲೂಃ 1- ಸಲೀಮಾ ಬಿ. ಕೋಂ ಅಬ್ದುಲ್ ಖಾಲಿಕ್ ಸಾಬ್

ದಿನಾಂಕಃ 19/09/2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು 2 ಮತ್ತು 7 ನೇ ಪ್ರತಿವಾದಿಯರ ಪರವಾಗಿ ಶ್ರೀ ಎಸ್.ಎಸ್. ವಕೀಲರಿಂದ**

(ಸಾಕ್ಷಿಗೆ ಕನ್ನಡ ಭಾಷೆ ಅರ್ಥವಾಗುವುದಿಲ್ಲ ಮತ್ತು ಕೇವಲ ತೆಲುಗು ಭಾಷೆ ಅರ್ಥವಾಗುತ್ತದೆ ಎಂದು ಹೇಳಿರುವುದರಿಂದ ಕನ್ನಡ ಮತ್ತು ತೆಲುಗು ಭಾಷೆ ಬಲ್ಲವರಾದ ಶ್ರೀ ಟಿ.ಜೆ.ಎಸ್. ವಕೀಲರನ್ನು ಭಾಷಾಂತರಕಾರ ಎಂದು ನೇಮಕ ಮಾಡಲಾಗಿರುತ್ತದೆ).

1. ದಾವಾ ಸ್ವತ್ತು ನನ್ನ ಸ್ವಯಾರ್ಜಿತ ಸ್ವತ್ತು ಆಗಿರುತ್ತದೆ ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆಯು ನಾನು ದಾವಾ ಸ್ವತ್ತನ್ನು ಖರೀದಿಸುವಾಗ ಬರೆಯಿಸಿಕೊಂಡು ಮೂಲ ಪತ್ರವಾಗಿರುತ್ತದೆ ಎಂದರೆ ಸರಿ ಅದನ್ನು ಈಗ ನಿಡಿ-1 ಎಂದು ಗುರುತಿಸಲಾಯಿತು. ಸದರಿ ಕ್ರಯ ಪತ್ರದ ಆಧಾರದ ಮೇಲೆ ದಾವಾ ಸ್ವತ್ತಿನ ಖಾತೆಯು ನನ್ನ ಹೆಸರಿನಲ್ಲಿ ದಾಖಲಾಗಿತ್ತು ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನನ್ನನ್ನು ಹೊರತು ಪಡಿಸಿ ಬೇರೆ ಯಾರಿಗೂ ಹಕ್ಕು ಇರುವುದಿಲ್ಲ ಎಂದರೆ ಸರಿ.

2. ನಾನು ಮತ್ತು ನನ್ನ ಮಕ್ಕಳು ಸೇರಿ ವಾದಿಗೆ ದಾವಾ ಸ್ವತ್ತಿಗೆ ಸಂಬಂಧಿಸಿ ರೂ.33 ಲಕ್ಷದ 60 ಸಾವಿರಕ್ಕೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇವೆ.. ನಾವು ಕರಾರು ಪತ್ರವನ್ನು 2018 ರಲ್ಲಿ ಬರೆದುಕೊಟ್ಟಿರುತ್ತೇವೆ. ಕರಾರು ಪತ್ರ ಬರೆದುಕೊಡುವಾಗ ನಾವು ವಾದಿಯಿಂದ ಮುಂಗಡ ಹಣವಾಗಿ ರೂ.12 ಲಕ್ಷದ 50 ಸಾವಿರಗಳನ್ನು ಪಡೆದುಕೊಂಡಿರುತ್ತೇವೆ. ಬಾಕಿ ಹಣವನ್ನು ಎಷ್ಟು ದಿನಗಳ ಒಳಗೆ ಕೊಡಬೇಕೆಂದು ಮಾತುಕತೆಯಾಗಿತ್ತು ಎಂದು ನನಗೆ ನೆನಪಿರುವುದಿಲ್ಲ ಕಾರಣ ಸಂಪೂರ್ಣ ವ್ಯವಹಾರವನ್ನು 2 ನೇ ಪ್ರತಿವಾದಿಯು ಮುಂದೆ ನಿಂತು ಮಾಡಿರುತ್ತಾರೆ. ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಲು ನನಗೆ ಯಾವುದೇ ಅವಶ್ಯಕತೆ ಇರಲಿಲ್ಲ ಆದರೆ ನನ್ನ ಮಕ್ಕಳು ದಾವಾ ಸ್ವತ್ತನ್ನು ಮಾರಾಟ ಮಾಡಿ ಹಣ ಪಡೆದುಕೊಳ್ಳೋಣ ಎಂದು ಹೇಳಿದ್ದಕ್ಕೆ ನಾವು ಮಾರಾಟ ಮಾಡಲು ಉದ್ದೇಶಿಸಿರುತ್ತೇವೆ. ನಾವು ಕರಾರು ಪತ್ರವನ್ನು ಬರೆದುಕೊಡುವ ದಿನ ವಾದಿ ಹತ್ತಿರ ರೂ.33 ಲಕ್ಷದ 60 ಸಾವಿರಗಳು ಇತ್ತೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ.

3. ಕರಾರು ಪತ್ರ ಬರೆದುಕೊಡುವ ದಿನ ನೇರವಾಗಿ ಯಾಕೆ ವಾದಿಗೆ ಕ್ರಯ ಪತ್ರ ಬರೆದುಕೊಡಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಅದು ನನಗೆ ಗೊತ್ತಿರುವುದಿಲ್ಲ ಆದರೆ ನನ್ನ ಮಕ್ಕಳಿಗೆ ಗೊತ್ತು ಎಂದು ನುಡಿಯುತ್ತಾರೆ. ನೇರವಾಗಿ ವಾದಿಗೆ ಕ್ರಯ ಪತ್ರ ಬರೆದುಕೊಡಲು ಆ ಸಮಯದಲ್ಲಿ ನಮಗೆ ಯಾವುದೇ ತೊಂದರೆ ಇರಲಿಲ್ಲ. ಕರಾರು ಪತ್ರದಲ್ಲಿ ಏನು ಬರೆಯಲಾಗಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಮುಂಗಡವಾಗಿ ಕೊಟ್ಟ ರೂ.12

ಲಕ್ಷದ 50 ಸಾವಿರಗಳನ್ನು ಹೊರತು ಪಡಿಸಿ ವಾದಿಯು ನನಗೆ ಬಾಕಿ ಹಣ ಇಂದಿನವರೆಗೂ ಕೊಟ್ಟಿರುವುದಿಲ್ಲ ಆದರೆ ಕ್ರಯಪತ್ರದ ಸಮಯದಲ್ಲಿ ಕೊಡುತ್ತೇನೆ ಎಂದು ಹೇಳಿರುತ್ತಾರೆ.. ಕರಾರು ಪತ್ರದಲ್ಲಿ ಕ್ರಯ ಪತ್ರ ಬರೆದುಕೊಡಲು 1 ತಿಂಗಳ ಅವಧಿ ನಿರ್ಧರಿಸಲಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ 1 ತಿಂಗಳ ಅವಧಿಯಲ್ಲಿ ವಾದಿಯು ಬಾಕಿ ಹಣವನ್ನು ಕೊಟ್ಟು ಕ್ರಯ ಪತ್ರವನ್ನು ಬರೆಯಿಸಿಕೊಳ್ಳಲು ಸಿದ್ಧರಿರುತ್ತಾರೆ ಎಂದು ಹೇಳಿ ನನಗೆ ಯಾವುದೇ ನೋಟಿಸ್ ಕೊಟ್ಟಿರುವುದಿಲ್ಲ. ಕರಾರು ಪತ್ರವನ್ನು ಮಾಡಿದ ದಿನದಂದು ನಾನು ಹಣ ಪಡೆದುಕೊಂಡು ಹಾಕಿದ ಸಹಿಗಳನ್ನು ಹೊರತು ಪಡಿಸಿ ನಂತರ ನಾನು ವಾದಿಯಿಂದ ಯಾವುದೇ ಹಣ ಪಡೆದುಕೊಂಡಿರುವುದಿಲ್ಲ ಮತ್ತು ಸಹಿಗಳನ್ನು ಹಾಕಿರುವುದಿಲ್ಲ. ಸದರಿ ಕರಾರು ಪತ್ರವನ್ನು ಬರೆದುಕೊಡುವುದಕ್ಕೂ ಮುಂಚೆ ನಾನು ನನ್ನ ಮಕ್ಕಳಿಗೆ ದಾವಾ ಸ್ವತ್ತನ್ನು ಬಿಟ್ಟುಕೊಟ್ಟಿರುವುದಿಲ್ಲ ಮತ್ತು ದಾಖಲೆಗಳನ್ನು ಬರೆದುಕೊಟ್ಟಿರುವುದಿಲ್ಲ.

4. ನನ್ನ ಗಂಡನಿಗೆ ಸೇರಿದ ಯಾವುದೇ ಸ್ವತ್ತುಗಳು ಇರುವುದಿಲ್ಲ. ನಾವು ಕರಾರು ಪತ್ರವನ್ನುಬರೆದುಕೊಟ್ಟ ನಂತರ ದಾವಾ ಸ್ವತ್ತಿನ ದಾಖಲೆಗಳಲ್ಲಿ ಏನು ಬದಲಾವಣೆಗಳು ಆಗಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ನನ್ನ ಮಕ್ಕಳಿಗೆ ಗೊತ್ತು. ಕರಾರು ಪತ್ರ ಆದ ನಂತರ ನಾನಾಗಲಿ ಅಥವಾ ನನ್ನ ಮಕ್ಕಳಾಗಲಿ ಬಾಕಿ ಹಣವನ್ನು ಕೊಟ್ಟು ಕ್ರಯ ಪತ್ರವನ್ನು ಬರೆದುಕೊಳ್ಳಿ ಎಂದು ಹೇಳಿ ವಾದಿಗೆ ಯಾವುದೇ ನೋಟಿಸ್ ಕೊಟ್ಟಿರುವುದಿಲ್ಲ. ವಾದಿಯು ನನಗೆ ಮತ್ತು ನನ್ನ ಮಕ್ಕಳಿಗೆ ನಿಪಿ–3 ರಂತೆ ನೋಟಿಸ್ ಕೊಟ್ಟಿರುತ್ತಾರೆ. ಸದರಿ ನೋಟಿಸ್ ಗೆ ನಾವು ಉತ್ತರ ಕೊಟ್ಟಿರುವುದಿಲ್ಲ. ವಾದಿಯು ಸದರಿ ನೋಟಿಸ್ ನ್ನು ನಮಗೆ ಕೊಡುವುದಕ್ಕೂ ಮುಂಚೆಯೇ ನಾನು ದಾವಾ ಸ್ವತ್ತನ್ನು 7 ನೇ ಪ್ರತಿವಾದಿಗೆ ಕೊಟ್ಟಿದ್ದೆಯೋ ಅಥವಾ ಇಲ್ಲವೋ ಎನ್ನುವ ಸೂಚನೆಗೆ ಸಾಕ್ಷಿಯು ನಾನು ಯಾವತ್ತೂ ದಾವಾ ಸ್ವತ್ತನ್ನು 7 ನೇ ಪ್ರತಿವಾದಿಗೆ ಬರೆದುಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಈಗ ನನಗೆ ತೋರಿಸಿದ ದಾಖಲೆಯು ನಾನು 7 ನೇ ಪ್ರತಿವಾದಿಗೆ ಬರೆದುಕೊಟ್ಟ ನೊಂದಾಯಿತ ದಾನ ಪತ್ರ ಆಗಿರುತ್ತದೆ ಎನ್ನುವ ಸೂಚನೆಗೆ ಸಾಕ್ಷಿಯು ನನಗೆ ಗೊತ್ತಾಗದೇ ಮತ್ತು ಪಿಂಚಣಿ ಹಣವನ್ನು ಹೆಚ್ಚು ಮಾಡಿಸಿಕೊಡುತ್ತೇನೆ ಎಂದು ನಂಬಿಸಿ 7 ನೇ ಪ್ರತಿವಾದಿಯು ಸದರಿ ದಾಖಲೆಗೆ ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಈಗ ನಿಡಿ–2 ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ನಾನು ಕೋಲಾರದ ಉಪವಿಭಾಗಾಧಿಕಾರಿ ರವರ ಮುಂಚೆ ಸಂರಕ್ಷಣಾ ಹಾಗೂ ಹಿರಿಯ ನಾಗರಿಕ ರಕ್ಷಣಾ ಕಾಯ್ದೆ ಅಡಿಯಲ್ಲಿ ಪ್ರಶ್ನಿಸಿದ್ದೆ ಎಂದರೆ ಸರಿ. ನಂತರ ಸದರಿ ನನ್ನ ಅರ್ಜಿಯಲ್ಲಿ ಉಪವಿಭಾಗಾಧಿಕಾರಿಯವರು ದಿನಾಂಕ 05.12.2022 ರಂದು ಆದೇಶ ಮಾಡಿ ದಾನ ಪತ್ರವನ್ನುರದ್ದು ಪಡಿಸಲು ಆಗುವುದಿಲ್ಲ ಎಂದು ಹೇಳಿ ನನಗೆ ಮಾಸಿಕ ರೂ.3 ಸಾವಿರಗಳ

ಜೀವನಾಂಶ ಕೊಡಬೇಕು ಎಂದು 7 ನೇ ಪ್ರತಿವಾದಿಗೆ ಆದೇಶ ಮಾಡಿರುತ್ತಾರೆ ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆಯು ಸದರಿ ಆದೇಶದ ನಕಲು ಆಗಿರುತ್ತದೆ ಎಂದರೆ ಸರಿ. ಅದನ್ನು ಈಗ ನಿಡಿ-3 ಎಂದು ಗುರುತಿಸಲಾಯಿತು. 7 ನೇ ಪ್ರತಿವಾದಿಯು ನನಗೆ ಹೆಚ್ಚಿನ ಪಿಂಚಣಿ ಹಣವನ್ನು ಮಾಡಿಸಿಕೊಡುತ್ತೇನೆ ಎಂದು ಮೋಸ ಮಾಡಿ ದಾನ ಪತ್ರವನ್ನುಬರೆಯಿಸಿಕೊಂಡಿರುತ್ತಾರೆ ಎಂದು ನಾನು ಉಪವಿಭಾಗಾಧಿಕಾರಿಗಳ ಮುಂದೆ ದಾಖಲಿಸಿದ್ದ ಅರ್ಜಿಯಲ್ಲೂ ಸಹ ಹೇಳಿದ್ದೆ.

5. ನಾನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸುಂದರಪಾಳ್ಯ ಶಾಖೆಯಲ್ಲಿ ಖಾತೆಯನ್ನು ಹೊಂದಿರುತ್ತೇನೆ ಎಂದರೆ ಸರಿ. ಸದರಿ ಖಾತೆಯಲ್ಲಿ 7 ನೇ ಪ್ರತಿವಾದಿಯು ಉಪವಿಭಾಗಾಧಿಕಾರಿಗಳ ಆದೇಶದ ಪ್ರಕಾರ ಪ್ರತೀ ತಿಂಗಳು ರೂ.3 ಸಾವಿರಗಳನ್ನು ಜಮಾ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪಿಂಚಣಿ ಹಣವು ಸದರಿ ಖಾತೆಯಲ್ಲಿಯೇ ಜಮಾ ಆಗುತ್ತದೆ. ಸದರಿ ಪಿಂಚಣಿ ಹಣವನ್ನು ನಾನು 3-4 ತಿಂಗಳಿಗೊಮ್ಮೆ ಡ್ರಾ ಮಾಡುತ್ತೇನೆ. ಸದರಿ ಖಾತೆಯ ಸ್ಟೇಟ್ ಮೆಂಟ್ ನ್ನು ಈ ದಾವೆಯಲ್ಲಿ ತರಿಸಿಕೊಳ್ಳಲು ನನ್ನ ಯಾವುದೇ ತಕರಾರು ಇರುವುದಿಲ್ಲ. ನಾನು ಉಪವಿಭಾಗಾಧಿಕಾರಿಗಳ ಆದೇಶದ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಅದೇ ರೀತಿ 7 ನೇ ಪ್ರತಿವಾದಿಯು ಮೋಸ ಮಾಡಿ ನನ್ನಿಂದ ದಾನ ಪತ್ರವನ್ನು ಬರೆಯಿಸಿಕೊಂಡಿರುತ್ತಾರೆ ಎಂದು ಹೇಳಿ ಅದನ್ನು ರದ್ದು ಪಡಿಸಿಕೊಳ್ಳಲು ನಾನು ಅವರ ವಿರುದ್ಧ ಯಾವುದೇ ದಾವೆ ದಾಖಲಿಸಿರುವುದಿಲ್ಲ.

6. ನನಗೆ 2022 ರಲ್ಲಿ ಈ ದಾವೆಯ ಸಮನ್ಸ್ ಜಾರಿಯಾಗಿತ್ತು. ತಕ್ಷಣ ನಾನು ದಾವೆಯಲ್ಲಿ ಹಾಜರಾಗಿ ನನ್ನ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಂತರ 3 ರಿಂದ 6 ನೇ ಪ್ರತಿವಾದಿಯರು ನನ್ನನ್ನು ಜುಲೈ 2024 ರಲ್ಲಿ ಈ ದಾವೆಯಲ್ಲಿ ಹಾಜರುಪಡಿಸಿ ನನ್ನಿಂದ ಲಿಖಿತ ಹೇಳಿಕೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ನಾನೇ ಸ್ವತಃ 7 ನೇ ಪ್ರತಿವಾದಿಗೆ ನನ್ನ ಸ್ವಇಚ್ಛೆಯಿಂದ ದಾನ ಪತ್ರವನ್ನುಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ 3 ರಿದ 6 ನೇ ಪ್ರತಿವಾದಿಯರು ನನ್ನ ಮೂಲಕ ಉಪವಿಭಾಗಾಧಿಕಾರಿಗಳ ಮುಂದೆಯು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. 7 ನೇ ಪ್ರತಿವಾದಿಯು ನನಗೆ ಮೋಸ ಮಾಡಿ ನನ್ನಿಂದ ದಾನ ಪತ್ರವನ್ನು ಬರೆಯಿಸಿಕೊಂಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ದಾವಾ ಸ್ವತ್ತಿನ ಖಾತೆಯು 7 ನೇ ಪ್ರತಿವಾಯ ಹೆಸರಿನಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ ಆದರೆ ಆತನು ಕಾನೂನು ಬಾಹೀರವಾಗಿ ಮಾಡಿಸಿಕೊಂಡಿರುತ್ತಾನೆ. ಸದರಿ ಖಾತೆಯನ್ನು ಪ್ರಶ್ನಿಸಿ ನಾನು ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಯಾವುಕೇ ಅಪೀಲು ದಾಖಲಿಸಿರುವುದಿಲ್ಲ. ದಾವಾ

ಸ್ವತ್ತು 7 ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿ. ನಾನು ಸ್ವತಃ 7 ನೇ ಪ್ರತಿವಾದಿಗೆ ದಾನ ಪತ್ರ ಬರೆದುಕೊಟ್ಟು ದಾವಾ ಸ್ವತ್ತಿನ ಸ್ವಾಧಿನವನ್ನು ಅವರಿಗೆ ಕೊಟ್ಟಿದ್ದು ಅದನ್ನು ಅವರು ಸ್ವೀಕರಿಸಿ ಸ್ವಾಧೀನ ಪಡೆದುಕೊಂಡು ಸ್ವತ್ತಿನ ಮಾಲಿಕರಾಗಿರುತ್ತಾರೆ ಎಂದರೆ ಸರಿಯಲ್ಲ.

7. ಬಾಬ ಸಾಬ್ ಎಂಬುವವರು ನನ್ನ ತಮ್ಮನಾಗಿದ್ದು ಅವರ ಮಗನಾದ ಇಮ್ತಿಯಾಜ್ ನನಗೆ ಗೊತ್ತು. ಸದರಿ ಇಮ್ತಿಯಾಜ್ ಈತನು ದಾನ ಪತ್ರಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿರುತ್ತಾನೆ ಎಂದರೆ ಸರಿ. 7 ನೇ ಪ್ರತಿವಾದಿಯು ನನ್ನ ಸಹಿಗಳನ್ನು ಪಡೆಯುವಾಗ ಆತನು ನನ್ನಿಂದ ದಾನ ಪತ್ರವನ್ನು ಬರೆಯಿಸಿಕೊಳ್ಳುತ್ತಿದ್ದಾನೆ ಎಂದು ನನಗೆ ಗೊತ್ತಿತ್ತು. ಈ ವಿಚಾರ ಈಗ ನನಗೆ 3 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ಸದರಿ ವಿಚಾರ ಗೊತ್ತಾದ ನಂತರ ನಾನು 7 ನೇ ಪ್ರತಿವಾದಿಗೆ ಯಾವುದೇ ನೋಟಿಸ್ ಕೊಟ್ಟಿರುವುದಿಲ್ಲ. ದಾನ ಪತ್ರಕ್ಕೆ ಮಲ್ಲಪಲ್ಲಿ ಗ್ರಾಮದ ವೆಂಕಟಸ್ವಾಮಿ ರವರೂ ಸಹ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಾನೇ ಸ್ವತಃ ದಾನ ಪತ್ರವನ್ನು ಬರೆದುಕೊಟ್ಟಿದ್ದರೂ ಸಹ 3 ನೇ ಪ್ರತಿವಾದಿಯ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾನ ಪತ್ರವನ್ನು ಕಿರಣ್ ಕುಮಾರ್ ಎಂಬುವವರು ಬರೆದಿರುತ್ತಾರೆ ಎಂದರೆ ಇರಬಹುದು ಆದರೆ ನನಗೆ ಗೊತ್ತಿರುವುದಿಲ್ಲ. 7 ನೇ ಪ್ರತಿವಾದಿಯು ಸದರಿ ದಾನ ಪತ್ರಕ್ಕೆ ಯಾವುದೇ ಸಹಿ ಮಾಡಿರುವುದಿಲ್ಲ.

8. ನನಗೆ ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿರುವುದಿಲ್ಲ. ನಾನು 3 ರಿಂದ 6 ನೇ ಪ್ರತಿವಾದಿಯರ ಮಾತು ಕೇಳಿ ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನೇ ದಾನ ಪತ್ರವನ್ನು ಬರೆದುಕೊಟ್ಟ ನಂತರ ಯಾವುದೇ ತಕರಾರು ಮಾಡಿರುವುದಿಲ್ಲ ಆದರೆ ನಂತರ ವಾದಿ ಮತ್ತು 2 ರಿಂದ 6 ನೇ ಪ್ರತಿವಾದಿಯರ ಮಾತು ಕೇಳಿ ದಾನ ಪತ್ರ ಕಾನೂನು ಬಾಹೀರವಾಗಿರುತ್ತದೆ ಎಂದು ಹೇಳಿ ಉಪವಿಭಾಗಾಧಿಕಾರಿಗಳ ಮುಂದೆ ಮತ್ತು ಈ ನ್ಯಾಯಾಲಯದಲ್ಲಿ ಸುಳ್ಳು ಆಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾನ ಪತ್ರದ ವಿಚಾರ ನನಗೆ ಗೊತ್ತಿರುವುದಿಲ್ಲ ಮತ್ತು 2 ನೇ ಪ್ರತಿವಾದಿಯೇ ಎಲ್ಲಾ ವ್ಯವಹಾರಗಳನ್ನು ಮಾಡುತ್ತಾನೆ.

9. ನನ್ನ ಮತ್ತು ನನ ಮಕ್ಕಳ ಮಧ್ಯ ವೈಶಮ್ಯ ಇರುವುದಿಲ್ಲ. ದಾನ ಪತ್ರ ಆಗುವ ಸಮಯದಲ್ಲಿ ನಾನು 7 ನೇ ಪ್ರತಿವಾದಿಯ ಜೊತೆಯೇ ವಾಸವಾಗಿದ್ದೆ. ನಾನು ವಾದಿಗೆ ಬರೆದುಕೊಟ್ಟಿರುತ್ತೇನೆ ಎಂದು ಹೇಳುತ್ತಿರುವ ಕರಾರು ಪತ್ರವು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿದ್ದು ಅದಕ್ಕೆ ಹೇಗಾದರೂ ಮಾಡಿ ಜೀವ ಕೊಡಬೇಕು ಎಂದು ನಾನು ವಾದಿ ಹಾಗೂ 3 ರಿಂದ 6 ನೇ ಪ್ರತಿವಾದಿಯರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗಾಗಿ ನಾನಾಗಲೀ 2 ರಿಂದ 6 ನೇ ಪ್ರತಿವಾದಿಯರಾಗಲಿ ಸದರಿ ಕರಾರು ಪತ್ರಕ್ಕೆ ಯಾವುದೇ

ಬಾಧ್ಯತೆ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಪ್ರಮಾಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್